# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ.174 ಹೆಚ್.ಎಸ್.ಆರ್ ಬಡಾವಣೆ ವಾರ್ಡ್ ಸಮಿತಿ ಸಭೆಯ ನಡುವಳಿಗಳು

ಮಾನ್ಯ ನೋಡಲ್ ಅಧಿಕಾರಿ/ಜಂಟಿ ಆಯುಕ್ತರು (ಮಹದೇವಪುರ) ರವರು ದಿನಾಂಕ: 06.02.2021 ರಂದು ಬೆಳಿಗ್ಗೆ 11.00 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.174 ಹೆಚ್.ಎಸ್.ಆರ್ ಕಛೇರಿಯಲ್ಲಿ ನಡೆಸಿದ್ದು, ಸಭೆಯ ನಡವಳಿ ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

| | ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು |
|---|---|
| 1. | ಶ್ರೀ ಆರ್. ವೆಂಕಟಚಾಲಪತಿ ಕ.ಆ.ಸೇ, ನೋಡಲ್ ಅಧಿಕಾರಿ ವಾ.ನಂ.174 ಹಾಗೂ ಜಂಟಿ ಆಯುಕ್ತರು (ಮಹದೇವಪುರ) ವಲಯ |
| 2. | ಶ್ರೀ ರವಿ.ಡಿ ಕಾರ್ಯದರ್ಶಿ, ಸಹಾಯಕ ಅಭಿಯಂತರರು. |
| 3. | ಶ್ರೀ ಹನುಮಂತರಾಯ ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಚ್.ಎಸ್.ಆರ್ ಉಪವಿಭಾಗ/ಬೃಹತ್ ನೀರುಗಾಲುವೆ/ಯೋಜನಾ ವಿಭಾಗ, |
| 4. | ಶ್ರೀ ಆರಕ್ಷಕ ನಿರೀಕ್ಷಕರು, ಹೆಚ್.ಎಸ್.ಆರ್ ಪೋಲಿಸ್ ಠಾಣೆ |
| 5. | ಶ್ರೀಮತಿ ಲಕ್ಷ್ಮಿ.ಬಿ, ಸಹಾಯಕ ಕಂದಾಯ ಅಧಿಕಾರಿ ಹೆಚ್.ಎಸ್.ಆರ್ ಬಡಾವಣೆ |
| 6. | ಶ್ರೀ ಯತೀಶ್ ಕುಮಾರ್, ಸಹಾಯಕ ಅಭಿಯಂತರರು, ಬೆಸ್ಕಾಂ |
| 7. | ಶ್ರೀ ಸಾಯಿಬಣ್ಣ ಸಹಾಯಕ ಅಭಿಯಂತರರು (ಬಿಡಬ್ಲ್ಯೂಎಸ್ಎಸ್‌ಬಿ) |
| 8. | ಶ್ರೀ ವಿನೋದ್, ಹಿರಿಯ ಆರೋಗ್ಯ ಪರಿವೀಕ್ಷಕರು |
| 9. | ಶ್ರೀಮತಿ ಸತ್ಯವಾಣಿ, ಕಿರಿಯ ಆರೋಗ್ಯ ಪರಿವೀಕ್ಷಕರು |
| 10. | ಶ್ರೀ ಅರುಣ ಕೆ ದೇಸಾಯಿ, ಹಿರಿಯ ಪಶುವೈದ್ಯಾಕೀಯ ಪರಿವೀಕ್ಷಕರು, (ಪಶುಪಾಲನಾ ಇಲಾಖೆ) |
| 11. | ಶ್ರೀ ಚಂದ್ರಶೇಖರ ಹೆಚ್.ಇ. ಆರ್.ಡಬ್ಲ್ಯೂ.ಎ/ ಸದಸ್ಯರು |
| 12. | ಶ್ರೀ ಬಿ.ಎನ್.ಆರ್ ರೆಡ್ಡಿ ಆರ್.ಡಬ್ಲ್ಯೂ.ಎ/ಸದಸ್ಯರು |
| 13. | ಶ್ರೀ ರಾಮಚಂದ್ರ, ಆರ್.ಡಬ್ಲ್ಯೂ.ಎ/ಸದಸ್ಯರು |
| 14. | ಶ್ರೀಮತಿ ದೀವ್ಯ ವೆಂಕಟೇಶ್, ಆರ್.ಡಬ್ಲ್ಯೂ.ಎ/ಸದಸ್ಯರು |
| 15. | ಶ್ರೀ ರವಿ ಡಿ, ಆರ್.ಡಬ್ಲ್ಯೂ.ಎ/ಸದಸ್ಯರು |
| 16. | ಶ್ರೀ ಬಿ.ಎಂ. ರಮೇಶ್, ಆರ್.ಡಬ್ಲ್ಯೂ.ಎ/ಸದಸ್ಯರು |

ಮಾನ್ಯ ನೋಡಲ್ ಅಧಿಕಾರಿ/ಜಂಟಿ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಹಾಗೂ ಸಂಘ ಸಂಸ್ಥೆಗಳ ಪದಾಧಿಕಾರಿಗಳಿಗೆ ಮತ್ತು ಸಾರ್ವಜನಿಕರಿಗೆ ಸ್ವಾಗತ ಕೋರುತ್ತಾ, ಸಭೆಯನ್ನು ಪ್ರಾರಂಭಿಸಲಾಯಿತು.

| ಕ್ರ.ಸಂ | ಇಲಾಖೆ | ವಿಷಯ |
|---|---|---|
| 1 | ವಿದ್ಯುತ್ ವಿಭಾಗ (ಬೀದಿ ದೀಪ) | ಹೆಚ್.ಎಸ್.ಆರ್ ಬಡಾವಣೆ ವಾರ್ಡ್ ವ್ಯಾಪ್ತಿಯ ಉದ್ಯಾನವನಗಳಲ್ಲಿ ಬೀದಿ ದೀಪಗಳ ವ್ಯವಸ್ಥೆ, ನಿರ್ವಹಣೆ, ಹಾಗೂ ದುರಸ್ಥಿ ಪಡಿಸಿ, ಟೈಮರ್ ಅಳವಡಿಸಲು ಸದಸ್ಯರು ಕೋರಿರುತ್ತಾರೆ. ಈ ಬಗ್ಗೆ ಸಹಾಯಕ ಅಭಿಯಂತರರು, (ವಿದ್ಯುತ್ ವಿಭಾಗ) ರವರಿಗೆ ಕ್ರಮವಹಿಸುವಂತೆ ಅಧ್ಯಕ್ಷರು ಸೂಚಿಸಿರುತ್ತಾರೆ.<br>**ಕ್ರಮ: ಸಹಾಯಕ ಅಭಿಯಂತರರು, (ವಿದ್ಯುತ್ ವಿಭಾಗ)** |

Scanned with Car

| ಕ್ರ.ಸಂ | ಇಲಾಖೆ | ವಿಷಯ |
|---|---|---|
| 2 | ಘನತ್ಯಾಜ್ಯ ನಿರ್ವಹಣೆ | ಹೆಚ್.ಎಸ್.ಆರ್ ಬಡಾವಣೆ ವಾರ್ಡ್ ವ್ಯಾಪ್ತಿಯ 5ನೇ ಮುಖ್ಯ ರಸ್ತೆ, 27ನೇ ಮುಖ್ಯ ರಸ್ತೆ, 19ನೇ ಮುಖ್ಯ ರಸ್ತೆ, ಸಾಯಿಬಾಬ ದೇವಸ್ಥಾನ ಹತ್ತಿರ, ಪಾದಚಾರಿ ಮಾರ್ಗದಲ್ಲಿ ಅನಧಿಕೃತವಾಗಿ ಮಳಿಗೆಗಳನ್ನು ತೆರವುಗೊಳಿಸಲು ಸಭೆಯಲ್ಲಿ ನಿರ್ಣಯವಾಯಿತು.<br>• ಕೋವಿಡ್–19 ಕೊರೋನಾ ಯೋದರಿಗೆ ಮೊದಲನೇ ಹಂತದ ಲಸಿಕೆಯನ್ನು ಯಶ್ವಸಿಯಾಗಿ ನೀಡಲಾಗಿದ್ದು, ಮುಂದಿನ ದಿನಗಳಲ್ಲಿ ಹಿರಿಯ ನಾಗರೀಕರಿಗೆ / ಸಾರ್ವಜನಿಕರಿಗೆ ಲಸಿಕೆ ಒದಗಿಸಲು ಸಭೆಯಲ್ಲಿ ಚರ್ಚಿಸಲಾಯಿತು.<br>ಈ ಬಗ್ಗೆ ಹಿರಿಯ/ಕಿರಿಯ ಆರೋಗ್ಯ ಪರೀವಿಕ್ಷಕ ರವರಿಗೆ ಕ್ರಮವಹಿಸುವಂತೆ ಅಧ್ಯಕ್ಷರು ಸೂಚಿಸಿರುತ್ತಾರೆ.<br><br>**ಕ್ರಮ : ಹಿರಿಯ/ಕಿರಿಯ ಆರೋಗ್ಯ ಪರೀವಿಕ್ಷಕ (ಹೆಚ್.ಎಸ್.ಆರ್ ಉಪವಿಭಾಗ)** |
| 3 | ತೋಟಗಾರಿಕೆ | • ವಾರ್ಡ್ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಗಿಡ/ಮರಗಳನ್ನು ಕಡೆಯುತ್ತಿದ್ದು ಈ ಬಗ್ಗೆ ಸಂಬಂಧಪಟ್ಟ ಅರಣ್ಯ ಅಧಿಕರಿಗಳಲ್ಲಿ ದೂರವಾಣಿ ಮುಂಖತಾರ ಕರೆ ಮಾಡಿದರು ಅಧಿಕರಿಗಳು ಕರೆಯನ್ನು ಸ್ವೀಕರಿಸಿರುವುದಿಲ್ಲವೆಂದು ವಾರ್ಡ್ ಸದ್ಯಸರು ಸಭೆಯಲ್ಲಿ ಕೋರಿರುತ್ತಾರೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಮುಂದಿನ ಸಭೆಗೆ ಹಾಜರಾಗಲು ತೋಟಗಾರಿಕೆ ಅಧಿಕ್ಷಿಕರಿಗೆ ಅಧ್ಯಕ್ಷರು ಸೂಚಿಸಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯ ಉದ್ಯಾನವಗಳಲ್ಲಿ ಬೀದಿ ದೀಪ ನಿರ್ವಹಣೆಯಾಗುತ್ತಿದ್ದು ಸದರಿ ಕಂಬಂಗಳ ದೀಪಗಳಿಗೆ ಮೀಟರ್ ಅಳವಡಿಸಲು ಸಭೆಯಲ್ಲಿ ಚರ್ಚಿಸಲಾಯಿತು.<br>• ವಾರ್ಡ್ ವ್ಯಾಪ್ತಿಯ ಉದ್ಯಾನವನಗಳನ್ನು ಅಭಿವೃಧಿ ಪಡಿಸಿ, ನವೀಕರಿಸಲು ಸದಸ್ಯರು ಕೋರಿರುತ್ತಾರೆ<br>ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮವಹಿಸುವಂತೆ ಅಧ್ಯಕ್ಷರು ಸೂಚಿಸಿರುತ್ತಾರೆ.<br>**ಕ್ರಮ: ತೋಟಗಾರಿಕೆ ಅಧೀಕ್ಷಕರು** |
| 4 | ಪೋಲಿಸ್ ಇಲಾಖೆ | ವಾರ್ಡ್ ವ್ಯಾಪ್ತಿಯಲ್ಲಿ ಹಿರಿಯ ನಾಗರೀಕರಿಂದ / ಮಹಿಳೆಯರಿಂದ ಕೆಲವು ದುಷ್ಕಮಿಗಳು ಮೋಬೈಲ್ / ಚೈನ್ ಸ್ನ್ಯಾಚಿಂಗ್ ಕಳತನವು ಹೆಚ್ಚಾಗುತ್ತಿದ್ದು, ಕಳತನವನ್ನು ತಡೆಗಟ್ಟಲು ಪೋಲಿಸ್ ಸಿಬ್ಬಂದಿ ರವರನ್ನು ನೇಮಿಸಿ ಕಳ್ಳರನ್ನು ಹಿಡಿಯಲು ಸಭೆಯಲ್ಲಿ ಸದಸ್ಯರು ಕೋರಿರುತ್ತಾರೆ.<br>ಈ ಬಗ್ಗೆ ಕ್ರಮ ವಹಿಸುವಂತೆ ಅಧ್ಯಕ್ಷರು ಸಂಬಂಧಪಟ್ಟ ಅಧಿಕರಿಗಳಿಗೆ ಸೂಚಿಸಿರುತ್ತಾರೆ.<br>**ಕ್ರಮ : ಪೋಲಿಸ್ ಇನ್ಸಪೆಕ್ಟರ್, ಹೆಚ್.ಎಸ್.ಆರ್ ಪೋಲಿಸ್ ಠಾಣೆ** |
| 5 | ಬಿ.ಡಬ್ಲ್ಯೂ.ಎಸ್.ಎಸ್.ಬಿ | • ವಾರ್ಡ್ ವ್ಯಾಪ್ತಿಯ ಕೇಕ್ ವಾಲಾ ಅಡ್ಡ ರಸ್ತೆಲ್ಲಿ ಡಾಂಬರೀಕರಣಗೊಳಿಸುವಂತೆ ಸಭೆಯಲ್ಲಿ ಸದಸ್ಯರು ಕೋರಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯ 6ನೇ ಸೆಕ್ಟರ್, 7ನೇ ಸೆಕ್ಟರ್ ರಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಸಲು ಸಭೆಯಲ್ಲಿ ಸದಸ್ಯರು ಕೋರಿರುತ್ತಾರೆ<br>• ವಾರ್ಡ್ ವ್ಯಾಪ್ತಿಯ Oxford College ಅಡ್ಡ ರಸ್ತೆಯನ್ನು ಅಗೆದಿದ್ದು, ಇದರಿಂದ ಸಾರ್ವಜನಿಕರಿಗೆ ಓಡಾಡಲು ಪರಿಯಾಯ ರಸ್ತೆ ವ್ಯವಸ್ಥೆ ಮಾಡಲು ಹಾಗೂ ಸದರಿ ರಸ್ತೆಯ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸಲು ಸಭೆಯಲ್ಲಿ ಸದಸ್ಯರು ಕೋರಿರುತ್ತಾರೆ. |

Scanned with Car

| | | |
|---|---|---|
| | | • ವಾರ್ಡ್ ವ್ಯಾಪ್ತಿಯ, 5ನೇ ಮುಖ್ಯ ರಸ್ತೆಯಿಂದ ಹೊರವರ್ತುಲ್ ರಸ್ತೆಯ ಹತ್ತಿರ ಕಾಮಗಾರಿ ಕೈಗೆತ್ತಿಕೊಂಡಿದ್ದು, ರಸ್ತೆಯನ್ನು ಹಾನಿ ಮಾಡಿರುತ್ತಾರೆ. ತುರ್ತಾಗಿ ಕಾಮಗಾರಿಯನ್ನು ಪೂರ್ಣಗೊಳಿಸಿ, ವೆಟ್ ಮಿಕ್ಸ್ ಹಾಕಿಸಲು ಸದಸ್ಯರು ಕೋರಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯಲ್ಲಿ ಸೆಕ್ಯರವಾರು ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಮೊದಲು ಬಿ.ಬಿ.ಎಂ.ಪಿ. ಬೆಸ್ಕಾಂ, ಗೇಲ್ ಗ್ಯಾಸ್ ರವರೊಂದಿಗೆ ಜಂಟಿ ತಪಾಸಣೆ ನಡೆಸಿ ಕಾಮಗಾರಿಯನ್ನು ಪ್ರಾರಂಭಿಸಲು ಹಾಗೂ ಸಾರ್ವಜನಿಕರಿಗೆ ಓಡಾಡಲು ಪರಿಯಾಯ ರಸ್ತೆಯ ವ್ಯವಸ್ಥೆ ಮಾಡಿ ಕಾಮಗಾರಿ ಪೂರ್ಣಗೊಳಿಸಲು ವಾರ್ಡ್ ಸದಸ್ಯರು ಕೋರಿರುತ್ತಾರೆ.<br>ಈ ಬಗ್ಗೆ ಕ್ರಮ ವಹಿಸುವಂತೆ ಅಧ್ಯಕ್ಷರು ಸಂಬಂಧಪಟ್ಟ ಅಭಿಯಂತರರಿಗೆ ಸೂಚಿಸಿರುತ್ತಾರೆ.<br>**ಕ್ರಮ : ಸ.ಅ. ಬಿಡಬ್ಲ್ಯೂ.ಎಸ್.ಎಸ್.ಬಿ.** |
| 6. | ಕಾಮಗಾರಿ ಇಲಾಖೆ | • ವಾರ್ಡ್ ವ್ಯಾಪ್ತಿಯ ಪರಂಗಿಪಾಳ್ಯದಲ್ಲಿ ಹೊಸದಾಗಿ ಚರಂಡಿ ಕಲ್ವರ್ಟ್ ಮತ್ತು ಡಾಂಬರೀಕರಣ ಕಾಮಗಾರಿ ನಿರ್ವಹಿಸಲು ಸದಸ್ಯರು ಕೋರಿರುತ್ತಾರೆ. ಈ ಬಗ್ಗೆ ಕ್ರಿಯಾಯೋಜನೆ ತಯಾರಿಸಿದ್ದು, ಕಾರ್ಯದೇಶ ನೀಡಿದ ನಂತರ ಕ್ರಮ ಕೈಗೊಳ್ಳಲಾಗುವುದೆಂದು ಸ.ಅ. ರವರು ತಿಳಿಸಿದರು.<br>• ಗೇಲ್ ಗ್ಯಾಸ್ ಸಂಸ್ಥೆ ರವರು ಗ್ಯಾಸ್ ಮಾರ್ಗಕ್ಕೆ ಅಗೆದಿರುವ ರಸ್ತೆಯನ್ನು ಯಥಾಸ್ಥಿತಿಗೆ ತರುತ್ತಿಲ್ಲವೆಂದು, ಸದರಿ ಅಗೆದಿರುವ ರಸ್ತೆಯನ್ನು ಪುನರ್ ಯಥಾಸ್ಥಿಗೆ ತರುವಂತೆ ಸದಸ್ಯರು ಸಭೆಯಲ್ಲಿ ಕೋರಿರುತ್ತಾರೆ.<br>ಈ ಬಗ್ಗೆ ಕ್ರಮ ವಹಿಸುವಂತೆ ಅಧ್ಯಕ್ಷರು ಸಂಬಂಧಪಟ್ಟ ಅಭಿಯಂತರರಿಗೆ ಸೂಚಿಸಿರುತ್ತಾರೆ.<br>**ಕ್ರಮ : ಸಹಾಯಕ ಅಭಿಯಂತರರು, ವಾರ್ಡ್ ನಂ. 174** |

ಅಂತಿಮವಾಗಿ ಮಾನ್ಯ ನೋಡಲ್ ಅಧಿಕಾರಿಗಳು, ವಾರ್ಡ್ ನಂ. 174 ಹಾಗೂ ಜಂಟಿ ಆಯುಕ್ತರು (ಮಹಾದೇವಪುರ) ವಲಯ ರವರು ಸಭೆಯಲ್ಲಿ ಚರ್ಚಿಸಲಾದ ಎಲ್ಲಾ ವಿಷಯಗಳ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ತುರ್ತು ಕ್ರಮವಹಿಸಲು ಸೂಚಿಸಿದರು ಹಾಗೂ ಸಾರ್ವಜನಿಕರು ನೀಡಿರುವ ದೂರಿನ ಬಗ್ಗೆ ಅಗತ್ಯ ಕ್ರಮವಹಿಸುವುದಾಗಿ ತಿಳಿಸುತ್ತಾ ಸಭೆಯಲ್ಲಿ ಹಾಜರಿದ್ದ ಎಲ್ಲಾರಿಗೂ ವಂದನೆಗಳನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ
ಸಹಾಯಕ ಅಭಿಯಂತರು
ಹೆಚ್.ಎಸ್.ಆರ್.ಬಡಾವಣೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನೋಡಲ್ ಅಧಿಕಾರಿ ವಾರ್ಡ್ ನಂ.174
ಹೆಚ್.ಎಸ್.ಆರ್.ಬಡಾವಣೆ ಹಾಗೂ
ಜಂಟಿ ಆಯುಕ್ತರು ಮಹದೇವಪುರ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned with Car